2003–04ನೇ ಸಾಲಿನಲ್ಲಿ ಸಣ್ಣ ಕಾಮಗಾರಿ ಕೆಲಸಗಳಿಗಾಗಿ ಈಗಾಗಲೇ ರೂಪಾಯಿ 70.00 ಲಕ್ಷಗಳಷ್ಟು ಅನುದಾನ ಬಿಡುಗಡೆಗೊಳಿಸಲಾಗಿದ್ದು, ಬೆಳಗಾವಿ ಕಾಮಗಾರಿ ಉಪವಿಭಾಗಕ್ಕೆ ರೂಪಾಯಿ 8.00 ಲಕ್ಷಗಳ ಅನುದಾನ ಬಿಡುಗಡೆಗೊಳಿಸಿ ಬಸ್ ನಿಲ್ದಾಣಗಳ ಪರಿಸರ ಕಾಪಾಡುವುದಕ್ಕೆ ಆದ್ಯತೆ ನೀಡಲು ಅಧಿಕಾರಿಗಳಿಗೆ ಆದೇಶ ನೀಡಲಾಗಿದೆ.

ಈ) ಹೌದು.

ಬಿಜಾಪುರ ಜಿಲ್ಲೆಗೆ ಬರಗಾಲ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಕ್ರಮ

3861 (4646) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತಿಕೋಟ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬರ ಪರಿಹಾರ ಯೋಜನೆಯಡಿ ಬಿಜಾಪುರ ಜಿಲ್ಲೆಗೆ ಮಂಜೂರಾದ ಹಾಗೂ ಬಿಡುಗಡೆ ಮಾಡಿದ ಅನುದಾನವೆಷ್ಟು:

ಆ) ಜಿಲ್ಲೆಗೆ ಬಿಡುಗಡೆಯಾದ ಅನುದಾನದಲ್ಲಿ ಬಿಜಾಪುರ ತಾಲ್ಲೂಕಿಗೆ ಬಿಡುಗಡೆ ಮಾಡಿದ ಅನುದಾನವೆಷ್ಟು:

ಇ) ಬರ ಪರಿಹಾರ ಯೋಜನೆಯಡಿ ಬಿಜಾಪುರ ತಾಲ್ಲೂಕಿನಲ್ಲಿ ತೆಗೆದುಕೊಂಡ ಕಾಮಗಾರಿಗಳಾವುವು?

ಈ) ಕಾಮಗಾರಿಗಳಿಗಾಗಿ ಮಾಡಿದ ವೆಚ್ಚವೆಷ್ಟು: (ಕಾಮಗಾರಿಗಳವಾರು ಮಾಹಿತಿ ನೀಡುವುದು):

ಉ) ಇಲ್ಲಿಯವರೆಗೂ ಅಭಾವ ಪರಿಸ್ಥಿತಿ ಇದ್ದು ಪರಿಹಾರಕ್ಕಾಗಿ ತೆಗೆದುಕೊಳ್ಳಬೇಕಾದ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು)

ಅ) ಪ್ರಕೃತಿ ವಿಕೋಪ/ ಎಸ್.ಸಿ.ಸಿ.ಎಫ್. ನಡಿಯಲ್ಲಿ 2002–03ನೇ ಸಾಲಿನಲ್ಲಿ ರೂ. 427.40 ಲಕ್ಷ ಹಾಗೂ 2003–04ನೇ ಸಾಲಿನಲ್ಲಿ ಇದುವರೆಗೆ ರೂ. 288.80 ಲಕ್ಷ ಬಿಡುಗಡೆ ಮಾಡಲಾಗಿದೆ.

ಆ) ತಾಲ್ಲೂಕುವಾರು ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿಲ್ಲ.

ಇ) ಬರ ಪರಿಹಾರ ಯೋಜನೆಯಡಿಯಲ್ಲಿ ತಏರೆದ ಬಾವಿ ಕೆರೆ ಹೂಳೆತ್ತುವುದು ನಾಲಾ ಬಂಡಿಂಗ್, ರಸ್ತೆ ದುರಸ್ತಿ ಇತ್ಯಾದಿ ಒಟ್ಟು 1846 ಕಾಮಗಾರಿಗಳನ್ನು ಜಿಲ್ಲೆಯು ತೆಗೆದುಕೊಳ್ಳಲಾಗಿದೆ.

ಈ) ಕಾಮಗಾರಿಗಳಿಗಾಗಿ ಬಿಡುಗಡೆ ಮಾಡಿದ ನಗದು ವೆಚ್ಚ ರೂ. 287.39 ಲಕ್ಷಗಳು ಹಾಗೂ ಆಹಾರಧಾನ್ಯ ರೂಪದಲ್ಲಿ 23883 ಮೆ:ಟನ್ ಖರ್ಚು ಮಾಡಲಾಗಿದೆ. ಕಾಮಗಾರಿಗಳ ವಿವರ ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ಅನುಷ್ಠಾನಾಧಿಕಾರಿಗಳ ಕಚೇರಿಯಲ್ಲಿ ಲಭ್ಯವಿದೆ.

ಉ) ಉದ್ಯೋಗ ಸೃಜನೆಗಾಗಿ ಎಸ್.ಜಿ.ಆರ್.ವೈ ವಿಶೇಷ ಘಟಕದ ಅಡಿಯಲ್ಲಿ ಆಹಾರಧಾನ್ಯ ಹಾಗೂ ಅನುದಾನ ಬಿಡುಗಡೆ ಮಾಡಲಾಗಿದೆ. ಕುಡಿಯುವ ನೀರಿನ ವ್ಯವಸ್ಥೆ ಜಾನುವಾರುಗಳಿಗೆ ಮೇವು, ಔಷಧಿ ಇತ್ಯಾದಿಗಾಗಿ ಅನುದಾನ ಬಿಡುಗಡೆ ಮಾಡಲಾಗಿದೆ. ಸಾಲದ ಮೇಲಿನ ಬಡ್ಡಿ ಮನ್ನಾ, ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ಪೂರೈಕೆ, ಭೂಕಂದಾಯ ಮನ್ನಾ ಇತ್ಯಾದಿ ಪರಿಹಾರ ಕ್ರಮ ತೆಗೆದುಕೊಳ್ಳಲಾಗಿದೆ.

ಬಾಗೇಪಲ್ಲಿ ತಾಲ್ಲೂಕಿನಲ್ಲಿ ದಿನಗೂಲಿ ನೌಕರರು

3879 (3226) : ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ದಿನಗೂಲಿ ನೌಕರರಾಗಿ ಕೆಲಸ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; ಇವರು ಎಷ್ಟು ವರ್ಷಗಳಿಂದ ದಿನಗೂಲಿ ನೌಕರರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು)

ಅ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ವ್ಯಪ್ತಿಯಲ್ಲಿ ವಿವಿಧ ಇಲಾಖೆಗಳಲ್ಲಿ ಒಟ್ಟು 36 ಮಂದಿ ದಿನಗೂಲಿ ನೌಕರರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಇವರುಗಳು 1984 ರಿಂದ 1990ರ ಅವಧಿಯಲ್ಲಿ ವಿವಿಧ ದಿನಾಂಕಗಳಂದು ನೇಮಕಾತಿ ಹೊಂದಿದ್ದು ಕಾರ್ಯ ನಿರ್ವಹಿಸುತ್ತಿದ್ದಾರೆ.

ಬೆಂಗಳೂರು ಮಹಾನಗರ ಪಾಲಿಕೆಗೆ ಬರಬೇಕಾಗಿರುವ ಆಸ್ತಿ ತೆರಿಗೆ

3907 (4479) : ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2000–2001 ರಿಂದ 2003ನೇ ಸಾಲಿನವರೆಗೆ ಬೆಂಗಳೂರು ಮಹಾನಗರ ಪಾಲಿಕೆಗೆ ಬರಬೇಕಾದ ಆಸ್ತಿ ತೆರಿಗೆ ಬಾಕಿ ಹಣ ಎಷ್ಟು?

ಆ) ಒಂದು ಲಕ್ಷಕ್ಕೂ ಹೆಚ್ಚು ತೆರಿಗೆ ಬಾಕಿ ಉಳಿಸಿಕೊಂಡಿರುವವರು ಯಾರು; ವರ್ಷವಾರು ವಿವರ ನೀಡುವುದು;

ಇ) ಹಣ ವಸೂಲಿಗಾಗಿ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು)

ಅ) 2000–01 ನೇ ಸಾಲಿನ ರೂ. 6660.23 ಲಕ್ಷಗಳು
ಬಾಕಿ ಆಸ್ತಿ ತೆರಿಗೆ
2001–02 ನೇ ಸಾಲಿನ–ರೂ. 7800.00 ಲಕ್ಷಗಳು
ಬಾಕಿ ಆಸ್ತಿ ತೆರಿಗೆ
2002–03 ನೇ ಸಾಲಿನ – ರೂ. 7300.05 ಲಕ್ಷಗಳು
ಬಾಕಿ ಆಸ್ತಿ ತೆರಿಗೆ

ಆ) ವಿವರವಾದ ಪಟ್ಟಿಯನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.

ಇ) ಕರ್ನಾಟಕ ಮುನಿಸಿಪಲ್ ಕಾಯ್ದೆ 1976 ಷೆಡ್ಯೂಲ್ III ಪಾರ್ಟ್–3 ರಂತೆ ಬಾಕಿ ಇರುವ ಆಸ್ತಿ ತೆರಿಗೆ ವಸೂಲಿ ಮಾಡಲು ತಗಾದೆ ನೋಟೀಸ್‌ನ್ನು ನೀಡಿ ತೆರಿಗೆ ವಸೂಲಿ ಮಾಡಲಾಗುತ್ತಿದೆ. ಅಲ್ಲದೆ ತೆರಿಗೆ ವಸೂಲಾತಿ ಶಿಬಿರಗಳನ್ನು ಸಹ ಏರ್ಪಡಿಸಲಾಗುತ್ತಿದೆ. ಅಂತಿಮವಾಗಿ ಅವಶ್ಯಕತೆ ಕಂಡುಬಂದ ಸಂದರ್ಭದಲ್ಲಿ ಚರ ಸ್ವತ್ತುಗಳನ್ನು ವಶಪಡಿಸಿಕೊಳ್ಳುವುದರ ಮೂಲಕ ಆಸ್ತಿ ತೆರಿಗೆ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಬೆಂಗಳೂರು ನಗರದ ಕ್ಲಬ್‌ಗಳು

3909 (4481) : ಶ್ರೀ ಆರ್. ಅಶೋಕ್, (ಉತ್ತರಹಳ್ಳಿ) ಮಾನ್ಯ ಮುಖ್ಯಮಂತ್ರಿಯವರ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಯಾವ ಯಾವ ಕ್ಲಬ್‌ಗಳಿಗೆ ಗುತ್ತಿಗೆ ಆಧಾರದ ಮೇಲೆ ಜಾಗ ನೀಡಲಾಗಿದೆ; ವಿವರ ನೀಡುವುದು;

ಆ) ಇವುಗಳ ಗುತ್ತಿಗೆ ಅವಧಿ ಯಾವಾಗ ಪೂರ್ಣಗೊಳ್ಳುತ್ತದೆ; ಕ್ಲಬ್‌ಗಳವಾರು ವಿವರ ನೀಡುವುದು;